ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 01 ಸಿಡಿಸಿ(2) 2019-20

ನಿರ್ದೇಶಕರ ಕಛೇರಿ
ಅರಮನೆ ರಸ್ತೆ
ಬೆಂಗಳೂರು-560 001
ದಿ: 12-07-2019.

**-:ಸುತ್ತೋಲೆ:-**

ವಿಷಯ: ಎನ್.ಐ.ಟಿ.ಟಿ.ಟಿ.ಆರ್. ಚೆನ್ನೈ, ಹಾಗೂ ಎನ್.ಐ.ಟಿ.ಟಿ.ಟಿ.ಆರ್. ವಿಸ್ತರಣಾ ಕೇಂದ್ರ ಬೆಂಗಳೂರು ಇಲ್ಲಿ ನಡೆಯುವ FDP-67, FDP-68 & FDP-69 ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ಕರ್ನಾಟಕ ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು ನಿಯೋಜನೆ ಮಾಡುವ ಕುರಿತು.

ಉಲ್ಲೇಖ: ಜಂಟಿ ನಿರ್ದೇಶಕರು(ಸಿಡಿಸಿ), ತಾಂ. ಶಿ. ನಿರ್ದೇಶನಾಲಯ, ಬೆಂಗಳೂರು, ಇವರ ಸಮ ಸಂಖ್ಯೆ ಜ್ಞಾಪನಗಳು ದಿನಾಂಕ:09-07-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಜ್ಞಾಪನಗಳನ್ವಯ ಎನ್.ಐ.ಟಿ.ಟಿ.ಟಿ.ಆರ್. ಚೆನ್ನೈ, ಹಾಗೂ ಎನ್.ಐ.ಟಿ.ಟಿ.ಟಿ.ಆರ್. ವಿಸ್ತರಣಾ ಕೇಂದ್ರ ಬೆಂಗಳೂರು ಇಲ್ಲಿ ದಿನಾಂಕ:15-07-2019 ರಿಂದ ದಿನಾಂಕ:19-07-2019ರವರೆಗೆ ಮತ್ತು ದಿನಾಂಕ:15-07-2019 ರಿಂದ ದಿನಾಂಕ:26-07-2019ರವರೆಗೆ ನಡೆಯುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ಕರ್ನಾಟಕ ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು FDP-67, FDP-68 & FDP-69 ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗಿರುವುದು ಸರಿಯಷ್ಟೆ.

ತಾಂತ್ರಿಕ ಶಿಕ್ಷಣ ಡಿಪ್ಲೋಮಾ ಪರೀಕ್ಷೆಗಳ ಮರು ಮೌಲ್ಯಮಾಪನ ಕಾರ್ಯ ದಿನಾಂಕ:17-07-2019 ರಿಂದ ಪ್ರಾರಂಭವಾಗುವುದರಿಂದ, ಸಂಸ್ಥೆಯ ಪ್ರಾಚಾರ್ಯರು, ಸದರಿ ಅಲ್ಪಾವಧಿ ತರಬೇತಿಗಳಿಗೆ ನಿಯೋಜಿಸಿರುವ ಸಿಬ್ಬಂದಿ ವರ್ಗದವರು ಡಿಪ್ಲೋಮಾ ಪರೀಕ್ಷೆಗಳ ಮರು ಮೌಲ್ಯಮಾಪನಾ ಕಾರ್ಯಕ್ಕೆ ಆಯ್ಕೆಯಾಗಿದ್ದಲ್ಲಿ, ಆದ್ಯತೆಯ ಮೇರೆಗೆ ಮರು ಮೌಲ್ಯಮಾಪನಾ ಕಾರ್ಯಕ್ಕೆ ಬಿಡುಗಡೆಗೊಳಿಸಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:
1. ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ, ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.
3. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಮಾಹಿತಿಗಾಗಿ.